**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 215/2021
ಪಿಡಬ್ಲು :6 ಸಿಡಬ್ಲು :31

ಸಾಕ್ಷಿಯ ಹೆಸರು : ಶ್ರೀ ಡಾ. ಕೆ ಎಸ್ ಗುರುದತ್ತ
ಗಂಡನ ಹೆಸರು : ಶ್ರೀ. ಕೆ ಎಮ್ ಸಿದ್ದಬಸವಯ್ಯ
ವಯಸ್ಸು : 48 ವರ್ಷ
ಉದ್ಯೋಗ : ಪಾಧ್ಯಾಪಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ
ಜೆ ಎನ್ ಮೆಡಿಕಲ್ ಕಾಲೇಜ, ಬೆಳಗಾವಿ
ವಾಸ್ತವ್ಯ : ಬೆಳಗಾವಿ
ದಿನಾಂಕ : 06-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಪರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಪರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 03-07-2021 ರಂದು ಶಹಪೂರ ಪೋಲಿಸ ಠಾಣೆಯ ಪೋಲಿಸರು ಮೃತ ಜೋತಿ ಲಕ್ಷ್ಮಿಕಾಂತ ಯಳ್ಳುರ್ಕಾರಿ ಇವರ ಮರಣೋತರ ಪರೀಕ್ಷೆ ಮಾಡಿ ವರದಿ ನೀಡುವಂತೆ ತಾಲೂಕಾ ದಂಡಾಧಿಕಾರಿಗಳು, ಬೆಳಗಾವಿ ಇವರ ಮುಖಾಂತರ

ಮೃತ ದೇಹವನ್ನು ಮನವಿಯೊಂದಿಗೆ ಪರೀಕ್ಷೆಗಾಗಿ ಕಳಹಿಸಿ ಕೊಟ್ಟಿದ್ದರು. ಮನವಿಯನ್ನು ನಿಪಿ–12 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–12 [ಎ] ಎಂದು ಗುರುತಿಸಲಾಯಿತು.

2. ದಿನಾಂಕಃ 03–07–2021 ರಂದು ಬೆಳಗಾವಿಯ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಮಧ್ಯಾಹ್ನ 12.10 ನಿಮಿಷಕ್ಕೆ ಮೃತ ದೇಹವನ್ನು ಪರೀಕ್ಷೆಗಾಗಿ ಸ್ವೀಕರಿಸಿ 12.10 ರಿಂದ 1.30 ರ ವರೆಗೆ ಮರಣೋತ್ತರ ಪರೀಕ್ಷೆಯನ್ನು ಮಾಡಿದ್ದೇನೆ.

3. ನಾನು ಪರೀಕ್ಷೆಗಾಗಿ ಸ್ವೀಕರಿಸಿದ ಮೃತ ದೇಹವು 19 ವರ್ಷ ವಯಸ್ಸಿನ ಹೆಣ್ಣು ದೇಹ ಆಗಿತ್ತು. ದೇಹದ ಶೆಟೆಯುವಿಕೆ ದೇಹದಿಂದ ಹೊರಗೆ ಹೋಗುತ್ತಿದ್ದು ದೇಹದ ಕೊಳೆಯುವಿಕೆಯು ಪ್ರಾರಂಭವಾಗುತ್ತಿತ್ತು.

4. ದೇಹದ ಮೇಲೆ ಕರಿ ಬಣ್ಣದ ಟಿ ಶರ್ಟ, ಕರಿ ಬಣ್ಣದ ಪ್ಯಾಂಟ ಹಾಗೂ ಕಂದು ಬಣ್ಣದ ಒಳ ಉಡುಪು ಇತ್ತು. ಮೃತ ದೇಹದ ಮೂಗು ಮತ್ತು ಬಾಯಿಯಿಂದ ಬಿಳಿ ಬಣ್ಣದ ನೊರೆ ಹೊರಗೆ ಬರುತ್ತಿತ್ತು.

5. ಮುಖವು ಬಿಳಿಚಿಕೊಂಡಿರಲಿಲ್ಲ, ಕಣ್ಣಿನಲ್ಲಿ ರಕ್ತ ಸ್ರಾವ ಆಗಿರಲಿಲ್ಲ, ಎರಡು ತುಟಿಗಳಲ್ಲಿ ಬಾವು ಇರಲಿಲ್ಲ.

6. ಎಡ ಮುಂಗೈನ ಒಳಭಾಗದಲ್ಲಿ ಕೊಯ್ದು ಗಾಯದ ಮಾಗಿದ ನಿಶಾನೆಗಳು ಕಂಡು ಬಂದವು. ಈ ರೀತಿ ಆದಂತಹ ಗಾಯಗಳು ಸ್ವಯಂಕೃತವಾದಂತಹ ಗಾಯಗಳು ಆಗಿರುತ್ತವೆ.

7. ಲಿಗೇಚರ ಮಾರ್ಕ ಸಮಾರು 20x 1.5 cm ಅಳತೆಯ ಇದ್ದು ದವಡೆ ಮೂಳೆಯ ಬಲಭಾಗದಿಂದ ಕುತ್ತಿಗೆಯ ಮುಂಭಾಗದಲ್ಲಿ ಥೈಯರಾಯ್ಡು ಕಾರ್ಟಿಲೆಜನ

ಮೇಲೆ ಹಾದು ಹೋಗಿ ಕುತ್ತಿಗೆ ಎಡಭಾಗದಲ್ಲಿ, ಕುತ್ತಿಗೆಯ ಹಿಂಭಾಗದ ವರೆಗೆ ಆವರಿಸಿತ್ತು. ಲಿಗೇಚರ ಮಾರ್ಕ ಮೇಲ್ಮುಖವಾಗಿತ್ತು.

8. ಕುತ್ತಿಗೆಯ ಒಳಭಾಗದಲ್ಲಿ ಕುತ್ತಿಗೆಯ ಮಾಂಸಖಂಡಗಳಿಗೆ ರಕ್ತ ಸ್ರಾವ ಆಗಿರಲಿಲ್ಲ. ಕುತ್ತಿಗೆಯ ಒಳಭಾಗದ ಅಂಗಾಗಳಿಗೆ ಗಾಯಗಳು ಆಗಿರಲಿಲ್ಲ.

9. ಹೈಯಾಡ್ ಮೂಳೆ ಮತ್ತು ಥೈರಾಯ್ಡು ಕಾರ್ಟಿಲೇಜ ಸುಸ್ಥಿತಿಯಲ್ಲಿತ್ತು.

10. ತಲೆಯ ಭಾಗದಲ್ಲಿಃ1) ಮದುಳಿನಲ್ಲಿ ರಕ್ತ ಸ್ರಾವ ಆಗಿರಲಿಲ್ಲ.

11. ಎದೆಯ ಭಾಗದ ಅಂಗಾಗಗಳು ಸುಸ್ಥಿತಿಯಲ್ಲಿದ್ದವುದಿ

12. ಉದರ ಭಾಗದ ಅಂಗಾಗಳು ಸುಸ್ಥಿತಿಯಲ್ಲಿದ್ದವು

ಹೊಟ್ಟೆಯಲ್ಲಿ ಸುಮಾರು 150 ಎಮ್ ಎಲ್ ನಷ್ಟು ಅರ್ದ ಜೀರ್ಣವಾದ ಆಹಾರ ಇದ್ದು ಅದರಲ್ಲಿ ಮಧ್ಯಸಾರದ ಘಾಟು ವಾಸನೆ ಬರುತ್ತಿತ್ತು.

ಗರ್ಭ ಕೋಶದಲ್ಲಿ ಕೆಂಪು ಉಂಡೆ ರೀತಿ ಇತ್ತು.

13. ಶವ ಪರೀಕ್ಷೆ ನಂತರ ನಾನು ಅಂಗಾಗಳನ್ನು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಬೆಳಗಾವಿ ಹಾಗೂ ಗರ್ಭಕೋಶದಲ್ಲಿದ್ದ ಕೆಂಪು ಉಂಡೆಯನ್ನು ಬಿಮ್ಸ ಆಸ್ಪತ್ರೆಯ ಪೆಥಾಲಾಜಿ ವಿಭಾಗಕ್ಕೆ ಪರಿಕ್ಷೆಗಾಗಿ ಕಳುಹಿಸಿ ಕೊಟ್ಟಿದ್ದೇನೆ.

14. ಮರಣೋತ್ತರ ಪರೀಕ್ಷೆ ಬಗ್ಗೆ ನಾನು ವರದಿಯನ್ನು ನೀಡಿದ್ದು ಅದರಲ್ಲಿ ಅಂತಿಮ ವರದಿಯನ್ನು ಕಾಯ್ದಿರಿಸಿದ್ದೇನೆ. ಮರಣೋತ್ತರ ವರದಿಯನ್ನು ನಿಪಿ-13 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-13 [ಎ] ಎಂದು ಗುರುತಿಸಲಾಯಿತು.

15. ಎಫ ಎಸ್ ಎಲ್ ವರದಿ ಬಂದ ನಂತರ ದಿನಾಂಕಃ 13-08-2021 ರಂದು ನಾನು ಅಂತಿಮ ವರದಿಯನ್ನು ನೀಡಿದ್ದೇನೆ. ಅದರಲ್ಲಿ ಜ್ಯೋತಿ ಅವರ ಸಾವು ಊರುಳು

ಹಾಕಿಕೊಂಡಿದ್ದರಿಂದ ಉಸಿರು ಗಟ್ಟಿ ಸಾವು ಸಂಭವಿಸಿರಬಹುದೆಂದು ವರದಿಯನ್ನು ನೀಡಿದ್ದೇನೆ. ಅಂತಿಮ ವರದಿಯನ್ನು ನಿಪಿ-14 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-14 [ಎ] ಎಂದು ಗುರುತಿಸಲಾಯಿತು.

16. ದಿನಾಂಕಃ 19-09-2021 ರಂದು ಎ ಸಿ ಪಿ ಮಾರ್ಕೇಟ ಪೋಲಿಸರು ಒಂದು ಬಿಳಿ ಬಣ್ಣದ ಹಗ್ಗವನ್ನು ಪರೀಕ್ಷಗಾಗಗಿ ಕಳುಹಿಸಿ ಕೊಟ್ಟಿದ್ದು ಅದು ಸುಮಾರು 123 ಸೆಂಟಿ ಮೀಟರ ಉದ್ದವಾಗಿದ್ದು ಎರಡು ತುದಿಯಲ್ಲಿ ಗಂಟು ಕಟ್ಟಲಾಗಿತ್ತು. ನಾನು ಸದರಿ ಹಗ್ಗವನ್ನು ಪರಿಕ್ಷೀಸಿ , ಆ ಹಗ್ಗವನ್ನು ಉರುಳು ಹಾಕಿಕೊಳ್ಳಲು ಬಳಸಿದರೆ ಅದರಿಂದ ಸಾವು ಸಂಭವಿಸಬಹುದು ಎಂದು ಅಭಿಪ್ರಾಯದೊಂದಿಗೆ ವರದಿಯನ್ನು ನೀಡಿದ್ದೇನೆ. ವರದಿಯನ್ನು ನಿಪಿ-15 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-15 [ಎ] ಎಂದು ಗುರುತಿಸಲಾಯಿತು.

17. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಳಿ ಬಣ್ಣದ ಬಾಂಗಿಯನ್ನು ತೆಗೆಯ ಸರಕಾರಿ ಅಭಿಯೋಕರು ಮನವಿ ಮಾಡಿದ್ದಾರೆ. ಬಾಂಗಿಯ ಮೇಲೆ ಸಾಕ್ಷಿ ಸಹಿ ಮತ್ತು ಮೊಹರು ಇರುವುದನ್ನು ಸಾಕ್ಷಿ ಗುರುತಿಸಿದ್ದಾರೆ. ಸದರಿ ಬಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಬಿಳಿ ಬಣ್ಣದ ಹಗ್ಗವನ್ನು ಸಾಕ್ಷಿ ತಾನು ಪರೀಕ್ಷಿಸಿದ ಹಗ್ಗ ಎಂದು ಗುರುತಿಸಿದ್ದಾರೆ.ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

18. ಶವದ ಮೈಮೇಲಿನ ಬಟ್ಟೆಗಳನ್ನು ಮರಣೋತ್ತರ ಪರೀಕ್ಷೆ ಸುವಯದಲ್ಲಿ ತೆಗೆದು ಆರ್ ಎಫ ಎಸ್ ಎಲ್ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ. ಈಗ ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ 3 ಬಾಂಗಿಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಒಂದು ಬಾಂಗಿಯಲ್ಲಿರುವ ಕಂದು ಬಣ್ಣದ ಒಳ ಉಡುಪು (ಪ್ಯಾಂಟಿ)ನ್ನು ಮು.ಮಾ-2 ಎಂದು ಗುರುತಿಸಲಾಯಿತು. ಇನ್ನೊಂದು

ಬಾಂಗಿಯಲ್ಲಿರುವ ಕಪ್ಪು ಬಣ್ಣದ ಪ್ಯಾಂಟ ನ್ನು ಮು.ಮಾ-3 ಎಂದು ಗುರುತಿಸಲಾಯಿತು ಹಾಗೂ ಇನ್ನೊಂದು ಬಾಂಗಿಯಲ್ಲಿರುವ ಕಪ್ಪು ಬಣ್ಣದ, ಮುಂಬಾಗದಲ್ಲಿ ಹಳದಿ ಬಣ್ಣದ ಚಿತ್ರ ಇರುವ ಶರ್ಟನ್ನು ಮು.ಮಾ-4 ಎಂದು ಗುರುತಿಸಲಾಯಿತು.

19. ಮು.ಮಾ-1 ಹಗ್ಗವನ್ನು ಕುತ್ತಿಗೆಗೆ ಹಾಕಿ ಮೇಲೆ ಜಗ್ಗಿದಾಗ ಸಾವು ಸಂಭವಿಸಬಹುದು ಎನ್ನುವುದು ಸರಿ.

**<u>ಪಾಟೀ ಸವಾಲು: ಆರೋಪಿತನ ಪರ ಶ್ರೀ.ಎಸ್.ಜಿ.ಜೆ ವಕೀಲರಿಂದ</u>**

ಶವದ ಕುತ್ತಿಗೆಯ ಮೇಲೆ ಬೆರಳಚ್ಚುಗಳನ್ನು ನಾನು ಗಮನಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ದೇಹವು ಕೊಳೆಯಲು ಪ್ರಾರಂಭವಾಗುತ್ತಿದ್ದರಿಂದ ಚರ್ಮದ ಮೇಲಿನ ಬೆರಳಚ್ಚುಗಳನ್ನು ಗುರುತಿಸಲು ಆಗುವುದಿಲ್ಲ. ಲಿಗೇಚರ ಮಾರ್ಕನ್ನು ಹೊರತು ಪಡಿಸಿ ದೇಹದ ಹೊರಮೈ ಮೇಲೆ ಹೊಸ ಗಾಯಗಳು ಕಂಡು ಬಂದಿರುವುದಿಲ್ಲ. ದೇಹದಲ್ಲಿ ಶೆಟೆವಿಕೆ ಹೊಗುತ್ತಿದ್ದು ದೇಹವು ಕೊಳೆಯಲು ಪ್ರಾರಂಭಸಿದ ಎರಡು ಅಂಶಗಳ ಮೇಲೆ ನಾನು ಸಾವು, ನಾನು ಮರಣೋತ್ತರ ಪರೀಕ್ಷೆ ಮಾಡುವ ಸಮಯದ 24-36 ಗಂಟೆಗಳ ಪೂರ್ವದಲ್ಲಿ ಸಾವು ಸಂಭವಿಸಿರಬಹುದೆಂದು ಅಭಿಪ್ರಾಯ ಪಟ್ಟಿದ್ದೇನೆ.

2. ನಾನು ಎಫ್.ಎಸ್.ಎಲ್ ವರದಿಯನ್ನು ಪರೀಶಿಲಿಸಿದ ನಂತರವೆ ಅಂತಿಮ ವರದಿಯನ್ನು ನೀಡಿದ್ದೇನೆ. ದೇಹದಲ್ಲಿ ಶೇಟೆಯುವಿಕೆ ಕಳೆದು ಹೋದಂತೆ ದೇಹವು ಕೊಳೆಯಲು ಪ್ರಾರಂಭಿಸುತ್ತದೆ.

3. ತನಿಖಾಧಿಕಾರಿಗಳು ಮರಣೋತ್ತರ ಪರೀಕ್ಷಾ ವರದಿಯನ್ನು ನೀಡುವಂತೆ ಯಾವ ದಿನಾಂಕದಂದು ಮನವಿ ಮಾಡಿದ್ದರು ಎಂದು ನನಗೆ ನೆನಪಿಲ್ಲ ಆದರೆ ದಿ 06-07-2021 ರಂದು ಪಿ ಸಿ ನಂ.1074 ರವರು ನಮ್ಮ ಆಸ್ಪತ್ರೆಯಿಂದ ವರುಣೋತ್ತರ

ವರದಿಯನ್ನು ಪಡೆದುಕೊಂಡು ಹೋಗಿದ್ದಾರೆ. ಮು.ಮಾ–1 ರೀತಿಯ ಗುರುತು ಕುತ್ತಿಗೆಯ ಮೇಲೆ ಮೂಡಿತ್ತೆ, ಸಾಕ್ಷಿ ಅದು ಎಲ್ಲಾ ಸಮಯದಲ್ಲಿ ಆ ರೀತಿ ಇರುವುದಿಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.